ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು):-

ಅ) ಸದ್ಯದಲ್ಲಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ಲಾಸ್ಟಿಕ್ ಚೀಲಗಳಲ್ಲಿ ಸಾರಾಯಿ ವಿತರಣೆ ಬಗ್ಗೆ

(೨೨೮೦) ೪೧೭. ಶ್ರೀ ಎಸ್. ಶಫಿ ಅಹಮದ್ (ತುಮಕೂರು):- ಮಾನ್ಯ ಗೃಹ ಮತ್ತು ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಆನಾರೋಗ್ಯದ ದೃಷ್ಟಿಯಿಂದ ಸಾರಾಯಿಯನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ವಿತರಿಸುವ ಕ್ರಮವನ್ನು ತಡೆಯಲು ತೆಗೆದುಕೊಂಡ ಸರ್ಕಾರದ ಕ್ರಮವೇನು?

೨) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಾಯಿ ಬಾಟ್ಲಿಂಗ್ ಘಟಕಗಳು ಎಷ್ಟು?

೩) ಮೊಹರಾದ ಸೀಸೆಗಳಲ್ಲಿ ಮತ್ತು ಪ್ಲಾಸ್ಟಿಕ್ ಚೀಲಗಳಲ್ಲಿ ಮಾರಾಟವಾದ ಸಾರಾಯಿಯ ಪ್ರಮಾಣ (ಜಿಲ್ಲಾವಾರು ಮಾಹಿತಿ ಒದಗಿಸುವುದು).

೪) ಈ ಸನ್ನದುಗಳ ನವೀಕರಣದ ಹಂತವನ್ನು ತಿಳಿಸುವುದು.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು):-

೧) ಸಾರಾಯಿಯನ್ನು ಮೊಹರಾದ ಸೀಸೆಗಳಲ್ಲಿ ವಿತರಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಕಾರ್ಯಕ್ರಮ ಮಾನ್ಯ ನ್ಯಾಯ ಮೂರ್ತಿ ಜಸ್ಟೀಸ್ ದೇಸಾಯಿ ಕಮೀಷನ್‌ನವರು ಮಾಡಿರುವ ಶಿಫಾರಸ್ಸುಗಳಲ್ಲಿ ಒಂದು.

೨) ೧೬ ಘಟಕಗಳು ಮತ್ತು ೫ ಡಿಪೋಗಳು.

೩) ಮೊಹರಾದ ಸೀಸೆಗಳಲ್ಲಿ ಮಾರಾಟವಾದ ಸಾರಾಯಿಯ ಮೊತ್ತ:-

ಲೀಟರ್‌ಗಳಲ್ಲಿ

(ಜುಲೈ ನಿಂದ ಜೂನ್) ೧೯೯೦-೯೧ ೭,೪೦,೩೧,೫೧೩
(ಜುಲೈ ರಿಂದ ಜನವರಿ) ೧೯೯೧-೯೨ ೩,೯೭,೨೧,೧೬೦

ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

೪) ಹಾಲಿ ನಡೆಯುತ್ತಿರುವ ಸಾರಾಯಿ ಘಟಕಗಳ ಪರವಾನಗಿ ಅವಧಿಯು ೩೦-೬-೯೨ಕ್ಕೆ ಮುಕ್ತಾಯಗೊಳ್ಳುತ್ತದೆ. ನವೀಕರಣದ ಸಲುವಾಗಿ ಈ ಸಂಬಂಧ ನಿಯಮಗಳ ಅನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ANNEXURE

QUANTITY OF ARRACK IS SOLD IN SEALED BOTTLES FOR THE YEARS 1990-91 AND 1991-92

Sl. No.	DISTRICT	1990-91 (July to June)	1991-92 (July 91 to Jan. 92)
1.	Bangalore (U)	1,47,23,754	64,42,425
2.	Bangalore (R)	32,48,566	15,11,395
3.	Belgaum	43,47,193	25,53,056
4.	Bellary	43,63,047	24,12,396
5.	Bidar	15,04,134	10,25,816
6.	Bijapur	24,06,320	14,81,520
7.	Chickmagalur	21,52,512	12,40,221
8.	Chitradurga	24,61,423	15,27,107
9.	D. Kannada	77,44,667	43,73,746
10.	Dharwad	29,30,109	17,51,347
11.	Gulbarga	30,32,647	15,62,603
12.	Hassan	24,50,328	16,49,895
13.	Kodagu	9,39,610	5,41,685
14.	Kolar	28,05,414	17,65,299
15.	Mandya	29,68,963	14,24,251
16.	Mysore	40,45,839	20,40,278
17.	Raichur	31,64,151	18,46,496
18.	Shimoga	42,48,333	20,01,076
19.	Tumkur	28,01,462	15,33,986
20.	U. Kannada	16,93,041	10,37,163
	TOTAL	7,40,31,513	3,97,21,160

ಉಪಾಧ್ಯಕ್ಷರು:- ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

<u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.</u>

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣೆಯವರೇ, ದಿನಾಂಕ ೨೪-೩-೯೨ರ ಲಿಖಿತ ಮೂಲಕ ಉತ್ತರಿಸುವ ೨೧ನೇ ಪಟ್ಟಿಯಲ್ಲಿರುವ ೫೦ ಪ್ರಶ್ನೆಗಳ ಪೈಕಿ ೨೭ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ ೨೩ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಚಿಕ್ಕಮಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ಕೆಲಸದ ವೆಚ್ಚದ ಬಗ್ಗೆ